# ಗಡಿಯಾರ

ಗೋಡೆ ಮೇಲಿನ ಗಡಿಯಾರ
ನಿನ್ನ ತಡೆಯೋರು ಯಾರು
ಟಿಕ್ ಟಿಕ್ ಎನ್ನುತ ಓಡುವೆ ನೀನು
ವೇಳೆಯ ನಮಗೆ ತಿಳಿಸುವೆ ನೀನು!

ದಿನವೂ ನಿನ್ನ ನೋಡುತಾರ
ಕೆಲಸಕೆ ಜನರು ಓಡುತಾರ
ರಜೆಯ ಎಂದಿಗೂ ಪಡೆಯದ ನೀನು
ಮಲಗದೆ ಕೆಲಸವ ಮಾಡುವೆ ನೀನು!

ಸಾದಾ ಸೀದಾ ಆಕಾರ
ಎಂದಿಗೂ ಸೋಲದ ಸಾಹುಕಾರ
ಜಾತಿ ಭೇದ ಮಾಡದೆ ನೀನು
ಎಲ್ಲರೂ ಒಂದೇ ಎನ್ನುವೆ ನೀನು!

ಜಗವೆ ನನ್ನದು ಅಂತಾರ
ಕೊನೆಗೆ ಬಿಟ್ಟು ಹೋಗ್ತಾರ
ಎಲ್ಲೆ ಇದ್ದರೂ ಎಂದಿಗೂ ನೀನು
ವೇಳೆಗೆ ಬೆಲೆಯ ಕೊಡುವೆ ನೀನು!

ಅಂದ ಚಂದದ ಗಡಿಯಾರ
ನಿನಗೆ ನನ್ನ ನಮಸ್ಕಾರ
ನಿನ್ನ ಗುಣವ ಕಲಿಯುವೆ ನಾನು
ಸಾಧನೆ ಮಾಡಿ ತೋರುವೆ ನಾನು!

■ **ವೆಂಕಟೇಶ ಚಾಗಿ**



ಶಶಿಧರ ಹಳೇಮನಿ




# ನನ್ನ ಗಿಡ

ಮನೆಯ ಮುಂದೆ ನಾನು ನೆಟ್ಟ
ಮಲ್ಲಿಗೆ ಬಳ್ಳಿ ಹಬ್ಬಿದೆ
ಎಲೆಯ ಕೀಳೆ ತಮ್ಮ ಮೆಲ್ಲಗೆ
ಅವನ ಕೊಂಚ ದಬ್ಬಿದೆ

ದಿನವೂ ಗಿಡಕೆ ನೀರನು
ತಪ್ಪದೆ ನಾನು ಹಾಕುವೆ
ಬಳ್ಳಿ ಮರವ ತಬ್ಬಿ ಬೆಳೆಯೆ
ಅಂದ ಚಂದ ನೋಡುವೆ

ಬಿಟ್ಟ ಮೊದಲ ಹೂವದು
ಗಣಪತಿಯ ಪೂಜೆಗೆ
ಮತ್ತೆ ಬಿಟ್ಟ ಗೊಂಚಲು
ಟೀಪಾಯಿಯ ಹೂಜಿಗೆ

ಜೋಪಾನದಿ ನೋಡಿಕೊಂಡು
ನಾನು ಮಾತ್ರ ಮುಟ್ಟುವೆ
ಆದರೆ ಅಮ್ಮ,ಅಕ್ಕಗೆ
ಹೂವ ತಂದು ಕಟ್ಟುವೆ

ಅಜ್ಜಿ,ಅತ್ತೆ,ದೊಡ್ಡಮ್ಮಗೆ
ಮಾಲೆ ತಂದು ಮುಡಿಸುವೆ
ಇನ್ನು ಗಿಡದ ಎಲೆಯು ಬೀಳೆ
ನಾನೇ ಬಂದು ಗುಡಿಸುವೆ

ಮನೆಯ ಸುತ್ತ ಗಿಡವು ಬೆಳೆಯೆ
ತಂಪು ಮತ್ತು ಹಸಿರದು
ಅದರ ತುಂಬಾ ಹೂವು ಬಿಡಲು
ಹಸಿರ ಮೇಲೆ ಮೊಸರದು

■ **ಅನುಷಾ ಪ್ರಭಾಕರ್ ಅಂಬಲಪಾಡಿ**